ವಿದ್ಯಾರ್ಥಿಯಂತೆ ಬೆನ್ನು ಸಿಮೆಂಟು ಸಾರಿಸದ ಗೋಡೆಗಾಣಿಸಿ ತನ್ನ ಅಪ್ಪನೆದುರು ಮೊಟ್ಟ ಮೊದಲಬಾರಿ ತನ್ನ ಆಸೆಯನ್ನು ಹೇಳಿಕೊಂಡು ತಾನೇನು ಮಹಾ ತಪ್ಪು ಮಾಡಿದವನಂತೆ ಕಡು ಗತ್ತಲೆಯಲ್ಲಿ ಕಂಪಿಸುತ್ತಲೇ ಕೇಳಿದ್ದ.

ಅಸಲು ಲಗಮಣ್ಣನಿಗೆ ಹುಬ್ಬಳ್ಳಿಯ ಕೆ.ಎಂ.ಸಿ ಕಾಲೇಜಿನ ಸರಕಾರಿ ಎಂಬಿಬಿಎಸ್ ಸೀಟು ಸಿಕ್ಕಿತ್ತು. ಆದರೂ ಮೆಡಿಕಲ್ ಓದಿಸುವಷ್ಟು ಈ ಹರುಕು ಮುರುಕು ಕುಟುಂಬದ ಬದುಕಿಗೆ ಸಾಧ್ಯವೆ ಎಂದು ಹತ್ತು ಹಲವಾರು ಬಾರಿ ಯೋಚಿಸಿ, ಏನಾದರೂ ಮಾಡಿ ಅಪ್ಪನ ಮನವೊಲಿಸಿ ಅಡ್ಮಿಷನ್ನಿನ ದುಡ್ಡು ಹೊಂದಿಸಿ ಕೊನೆಗೆ ಸ್ಕಾಲರ್ ಶಿಪ್ ಹಣದಲ್ಲಿ ಮಾಡಿದ ಸಾಲ ತೀರಿಸಿದರಾಯ್ತು ಎಂಬ ಧೈರ್ಯ ಮಾಡಿ ಅಪ್ಪನ ಹತ್ತಿರ ಕೇಳಿದ್ದ.

ರಾತ್ರಿ ಎಷ್ಟೊತ್ತಿನ ತನಕ ಅಪ್ಪ ಮಗ ಮಾತನಾಡುತ್ತ ಪಡಸಾಲೆಯಲ್ಲೇ ಮಲಗಿದ್ದರು. ಒಳಗೆ ಜನಾಬಾಯಿ ಔಷಧಿ ಮಂಪರಿನಲ್ಲಿ ನಿದ್ದೆಗೆ ಜಾರಿದ್ದರೂ ಸೊಂಯ್ ಸೊಂಯ್ ದಮ್ಮಿನ ಸದ್ದು ನಡುರಾತ್ರಿಯ ನೀರವತೆಯಲ್ಲಿ ಈಗ ಬೀದಿ ತನಕ ಕೇಳಿಸುತ್ತಿತ್ತು.

ಬಂಡೆ ಬಸಪ್ಪನ ದೊಡ್ಡಿಯ ಯಕಶ್ಚಿತ್ ಬೀದಿ ಸುತ್ತಿ ಹಣ್ಣು ಮಾರುವ ರೈತನ ಮಗನೊಬ್ಬ ಡಾಕ್ಟರ್ ಆಗುವ ಕನಸು ಕಾಣುವುದೊಂದು ಬಸಣ್ಣನಿಗೆ ಎತ್ತಲಾರದ ಬಲು ಭಾರದ ಕನಸಾಗಿತ್ತು. ಊರಿನವರಿಗೆ ಹೇಳಿದರೆ ಎಲ್ಲಿ ಎಲ್ಲರೂ ನಕ್ಕು ಬಿಟ್ಟಾರೆಂದು ಯಾರೊಂದಿಗೂ ಈ ಗುಟ್ಟು ಹೇಳಲಿಲ್ಲ. ಈ ಚಿಂತೆಯಲ್ಲೇ ಎರಡು ದಿನ ಸಣ್ಣಪ್ಪ ಸಾವುಕಾರರಲ್ಲಿ ರೊಕ್ಕ ಕೇಳುವುದೊ ಬೇಡವೋ ಎಂಬ ಅನುಮಾನ ಆತಂಕದಲ್ಲೇ ಅವರ ಮನೆ ಸುತ್ತ ಮುತ್ತವೇ ಸುತ್ತಿದ.

ಊರ ತುಸು ಹೊರಗಿನ ಹೊಲದಲ್ಲಿ ಔಟ್ ಹೌಸಿನ ಬಂಗಲೆಯಲ್ಲಿ ಸಾವುಕಾರರ ಮನೆ. ಮನೆಯ ಬಲಭಾಗದಲ್ಲಿ ವಿಶಾಲವಾಗಿ ಬೆಳೆದಿದ್ದ ಆಲದ ಮರದ ಅರ್ಧ ಬಿಳಿಲು ಕತ್ತರಿಸಿ ಕಾರು ಶೆಡ್ಡು ಕಟ್ಟಿದ್ದರು. ಮನೆಯ ಎಡಭಾಗದಲ್ಲಿ ಆಡು ಎತ್ತು ಕುರಿ ಕೋಳಿಗೆಂದು ದೊಡ್ಡ ಶೀಟು ಮನೆ. ಸಾವುಕಾರು ಈ ನಡುವೆ ಮನೇಲಿ ಇರುವುದೇ ಅಪರೂಪ. ಎರಡು ದಿನ ದಾರಿ ಕಾದ ಬಸಣ್ಣ ಇಂದು ಸಾವುಕಾರರ ಕಾರು ಮನೆಯೆದುರು ಇರುವುದು ಖಾತ್ರಿ ಪಡಿಸಿಕೊಂಡೇ ಒಳಗೆ ಬಂದಿದ್ದ.

'ಮೈಯ್ಯಾಗ ಹುಷಾರಿಲ್ಲೇನೋ ಬಸಣ್ಣಾ ಜನಾಬಾಯಿ ಹೆಂಗಿದ್ದಾಳೆ' ಎಂದು ಅಕ್ಕೋರು ಕುಶಾಲಿ ವಿಚಾರಿಸಿದಾಗ ತಲೆ ತಗ್ಗಿಸಿ 'ಹುಷಾರ ಅವ್ರಿ ಅವ್ವಾರ' ಅಂತ ಅಂಗಳದಲ್ಲಿ ಒಣಹಾಕಿದ್ದ ಕೆಂಪು ಬ್ಯಾಡಗಿ ಮೆಣಸಿನಕಾಯಿ ಮೇಲೆ ಕೈಯಾಡಿಸುತ್ತ ಹೇಳಿದ್ದ.

'ಲಗಮಣ್ಣಾ'... ಅಂದ.

ಅಕ್ಕೋರಿಗೆ ಲಗಮಣ್ಣನ ಹೆಸರು ಕಿವಿಗೆ ಬೀಳದೆ ಆಗಲೇ ಪಡಸಾಲೆ ದಾಟಿ ಒಳ ಮನೆಗೆ ಹೋಗಿದ್ದರು.

ಅದೇ ಸಮಯಕ್ಕೆ ಸಣ್ಣಪ್ಪ ಸಾವುಕಾರು ಇಳಿ ಮಧ್ಯಾಹ್ನದ ನಿದ್ದೆಯಿಂದ ಎದ್ದವರಂತೆ ದೊಡ್ಡದಾಗಿ ಬಾಯಿ ತೆಗೆದು ಆಕಳಿಸಿ ಸಿಗರೇಟು ಅಂಟಿಸಿದರು. ಬಸಣ್ಣಾ ಅಂಜುತ್ತಲೇ ಸಾವುಕಾರ ಹತ್ರ ಹೋಗಿ ಸಣ್ಣಗೇ ಕೆಮ್ಮಿದ.

'ಏನ್ ಬಸಣ್ಣಾ ರೊಕ್ಕ ಗಿಕ್ಕ ಬೇಕಾಗಿತ್ತೇನು?'

ಬಸಣ್ಣಗೆ ತುಸು ಧೆರ್ಯ ಬಂದಂತಾಗಿ, 'ಹೌದು ಸಾವುಕಾರ್ರೆ ಒಂದು ಲಕ್ಷ ರೂಪಾಯಿ ಬೇಕಾಗಿತ್ರಿ' ಅಂದಿದ್ದೇ ತಡ, ಸಾವುಕಾರು ತೇಲುಗಣ್ಣು ಮೇಲುಗಣ್ಣು ಮಾಡಿ 'ಒಂದು ಲಕ್ಷ ಸಾಕೇನಪಾ? ಪಂಚೇತಿ ಎಲೆಕ್ಷನ್‌ಕ್ಕೇನಾದ್ರೂ ನಿಲ್ಲಾವಿದ್ದೀಯೇನ' ಅಂತ ಗಹಗಹಸಿ ನಕ್ಕರು...

'ಇಲ್ರೀ ಅದು ನಮ್ಮ ಲಗಮಣ್ಣಗ ಎಂ.ಬಿ.ಬಿ.ಎಸ್ ಸೀಟ್ ಸಿಕ್ಕೈತ್ರೀ. ಹುಬ್ಬಳ್ಳಿ ಕಾಲೇಜಿನಾಗ ಅಡ್ಮಿಷನ್ನಿಗ ಒಂದೂವರೆ ಲಕ್ಷ ಕೇಳ್ತಾಕತ್ತಾರ್ರಿ... ಮನೇಲಿದ್ದ ಕಾಸು, ಕರಿಮಣಿ, ಎಲ್ಲಾ ಸೇರಿಸಿ ಐವತ್ತ ಸಾವಿರ ಹೊಂದಿಸೇನ್ರೀ ಮತ್ತ ನಮ್ಮ ಗುಡ್ಡದ ಮಡ್ಡಿ ಹೊಲದ ಪೇಪರ ಮ್ಯಾಗ ಒಂದು ಲಕ್ಷ ರೂಪಾಯಿ ಸಾಲ ಕೊಟ್ಟರ ಉಪಕಾರ ಆಕ್ಕೈತ್ರಿ' ಬಸಣ್ಣ ಒಂದೇ ಉಸುರಿಲೇ ಹೇಳಿದ.

'ಅಲ್ಲಪಾ ಬಸಣ್ಣಾ, ಮೆಡಿಕಲ್ ಕಲಸುದೇನೊ ಹುಡುಗಾಟಿಗಿ ಅಂದಕೊಂಡಿ ಏನ್? ಎಷ್ಟು ಖರ್ಚ, ಏನ ಕತಿ? ಮತ್ತ ಡಾಕ್ಟರಿಕಿ ಡಿಗ್ರಿ ಮುಗಿಸಿ ಬಂದಾವ್ರ ಗಲ್ಲಿಗೊಬ್ರ ದವಾಖಾನಿ ತಗದು ನೊಣ ಹೊಡಕೋಂತ ಕುಂತಾರ. ಅಂತಾದ್ರಾಗ ನೀ ಹೊಲ ಅಡಇಟ್ಟು ಸಾಲಿ ಕಲಸ್ತೀನಿ ಅನ್ನುವುದು ನಗೆಚಾಟಿಕಿ ಮಾತಲ್ಲಾ. ಈ ವರ್ಸಕ ಹೊಲ ಬರ್ಕೊಂದು ಸಾಲ ಕೊಡ್ತೀನಿ, ಮುಂದಿನ ವರ್ಸಕ ಏನ್ ಮಾಡ್ತೀ?' ಅಂತ ಅಂದ ಸಾವುಕಾರರು ಯಾವುದೋ ಫೋನಿನಲ್ಲಿ ಬಿಜಿಯಾದರು.